ಸ್ಮರಿಸುತ್ತಿದ್ದ. ಪಿಯುಸಿ ಮುಗಿದ ಮೇಲೆ ಶಿವಮೊಗ್ಗದಲ್ಲಿ ಡಿಗ್ರಿ ಓದಬೇಕು. ಆಮೇಲೆ ಸರ್ಕಾರಿ ಕೆಲಸ ಹಿಡಿಬೇಕು ಅಂತಿದ್ದ. ಆದರೆ ಅವನಿಗೆ ಸರ್ಕಾರಿ ಸಿಕ್ಕಲಿಲ್ಲ. ಊರಿಗೆ ಹೋಗಿ ಅಪ್ಪನ ಗದ್ದೆ, ತೋಟ ನೋಡಿಕೊಂಡು ಇರಲು ಇಷ್ಟವಿಲ್ಲದೆ ದುಡ್ಡು ಸಂಪಾದನೆ ಮಾಡಬೇಕು ಅಂತ ಯಾರಿಗೂ ಹೇಳದೆ ಮುಂಬಯಿಗೆ ಹೋದ. ಅಲ್ಲಿಗೆ ಹೋದ ಮೇಲೂ ವಿಶ್ವನಿಗೆ ಆಗಾಗ ಪತ್ರ ಬರೆಯುತ್ತ, ಮೂರ್ನಾಲ್ಕು ತಿಂಗಳಿಗೊಮ್ಮೆ ಫೋನ್ ಮಾಡುತ್ತ ತನ್ನ ಗೆಳೆತನವನ್ನು ನವೀಕರಿಸಿಕೊಂಡಿದ್ದ.

ನಲವತ್ತು ವರ್ಷಗಳ ಹಿಂದೆ ಕೊಪ್ಪದಲ್ಲಿ ಸತ್ಯನ ಜತೆ ಕಳೆದ ದಿನಗಳು ಒಂದೊಂದಾಗಿ ನೆನಪಾದವು. ಮಣ್ಣಿನ ಗುಡ್ಡಗಳ ಮೇಲೆ ಕಟ್ಟಿದ್ದ ಸಣ್ಣ ಊರು ಕೊಪ್ಪದಲ್ಲಿ ವರ್ಷದ ನಾಲ್ಕು ತಿಂಗಳು ಬಿಟ್ಟೂ ಬಿಡದೆ ಮಳೆ ಸುರಿಯುತ್ತಿತ್ತು. ಅಲ್ಲಿನ ಅಂಕು ಡೊಂಕಿನ ರಸ್ತೆಗಳಲ್ಲಿ ಶಂಕರ್ ಕಂಪನಿ ಬಸ್ಸುಗಳ ಓಡಾಟದ ಮೊನಾಪಲಿ ಇದ್ದ ಕಾಲ. ಮಳೆಗಾಲದ ಸಂಜೆಗಳಲ್ಲಿ ಪ್ಲಾಸ್ಟಿಕ್ ಚಪ್ಪಲಿ ಮೆಟ್ಟಿಕೊಂಡು, ಕೊಡೆ ಹಿಡಿದು ಅಲ್ಲಿನ ಬೀದಿಗಳಲ್ಲಿ ಸತ್ಯನ ಜತೆ ಅಲೆದಾಡಿದ್ದು, ಶಂಕರ್ ಗ್ಯಾರೇಜಿನ ಕ್ಯಾಂಟೀನಿನಲ್ಲಿ ಹಬೆಯಾಡುತ್ತಿದ್ದ ಕಾಫಿ ಕುಡಿದದ್ದು, ಮಳೆಗಾಲ ಮುಗಿದ ಮೇಲೆ ಬಾಡಿಗೆ ಸೈಕಲ್ ಹತ್ತಿ ಕೊಪ್ಪದ ಏರಿಳಿತದ ರಸ್ತೆಗಳಲ್ಲಿ ಸುತ್ತಾಡಿದ್ದು. ಒಂದೇ ಎರಡೇ ಹತ್ತಾರು ನೆನಪುಗಳು! ಕೊಪ್ಪ ಈಗ ಬೆಳೆದಿದೆಯಂತೆ! ನೆನಪಿನ ಭಿತ್ತಿಯಲ್ಲಿ ಇನ್ನೂ ಸಣ್ಣ ಊರಿನಂತೇ ಇರುವ ಕೊಪ್ಪವನ್ನು ಮತ್ತೆ ನೋಡಬೇಕು ಅನ್ನೋ ಆಸೆ ವಿಶ್ವನಲ್ಲಿ ಹುಟ್ಟಿಕೊಂಡಿತು.

*

ಕೊಪ್ಪಕ್ಕೆ ಬಂದಾಗ ಬೆಳಗಿನ ಐದೂವರೆ. ಕ್ಷಣಕ್ಷಣಕ್ಕೆ ಬೆಳಕು ದಟ್ಟವಾಗುವ ಪ್ರಕ್ರಿಯೆಗೆ ಕೊಪ್ಪ ತೆರೆದುಕೊಂಡಿತ್ತು. ಆಟೋಗಳ ಓಡಾಟ ಇನ್ನೂ ಶುರು ಆಗಿರಲಿಲ್ಲ. ಹೆಂಚಿನ ಛಾವಣಿಯ ಬಸ್ ಸ್ಟಾಂಡ್ ಕಟ್ಟಡ ನಾಪತ್ತೆಯಾಗಿತ್ತು. ಅದು ಹೇಗಿತ್ತು ಅನ್ನೋದು ವಿಶ್ವನ ಅಂದಾಜಿಗೆ ಸಿಕ್ಕಲಿಲ್ಲ. ಸತ್ಯ ಹೇಳಿದಂತೆ, ಆಟೋ ಹತ್ತಿ ರೆಸಾರ್ಟ್‌ಗೆ ಬಂದಾಗ ಅಚ್ಚರಿ ಕಾದಿತ್ತು. ಹದಿನಾರು ಕಾಟೇಜುಗಳ ರೆಸಾರ್ಟ್! ಚೆಕ್ಕಿನ್ ಆಗಿ ಅದರ ಮುಂಭಾಗಕ್ಕೆ ಬಂದು ನಿಂತ. ಮಣ್ಣಿನ ಬೋಳುಗುಡ್ಡದ ಸ್ವಲ್ಪ ಭಾಗವನ್ನು ಸಮತಟ್ಟಾಗಿಸಿ ಅದರ ಮೇಲೆ ಕಟ್ಟಿದ್ದ ಲಾಡ್ಜ್‌ನ ರಿಸೆಪ್ಷನ್ ಒಂದೇ ಆರ್‌ಸಿಸಿ ಕಟ್ಟಡ. ಅದರ ಹಿಂದೆ ಏರು ಗುಡ್ಡದ ಮೇಲೆ ಅಲ್ಲಲ್ಲಿ ಹೆಂಚಿನ ಛಾವಣಿಯ ಕಾಟೇಜ್‌ಗಳು. ಎದುರಿಗೆ ದೂರದಲ್ಲಿ ಕೊಪ್ಪ ಕಾಣುತ್ತಿತ್ತು. ವಿರಳವಾಗಿದ್ದ ಮರಗಳ ನಡುವೆ ಕಾಣುತ್ತಿದ್ದ ಕಟ್ಟಡಗಳನ್ನೊಮ್ಮೆ ದಿಟ್ಟಿಸಿದ. ಹೊಸ ಕಟ್ಟಡಗಳಿಂದಾಗಿ ನಲವತ್ತು ವರ್ಷಗಳ ಹಿಂದಿನ ಕೊಪ್ಪ ಅವನ ಕಣ್ಣ ಅಂದಾಜಿಗೆ ದಕ್ಕಲಿಲ್ಲ.

ಹನ್ನೊಂದು ಗಂಟೆ ಹೊತ್ತಿಗೆ ಸತ್ಯ ಬಂದ. ಅವನ ಮುಖದ ಮೇಲೆ ಭಯ, ಆತಂಕ ಎರಡೂ ಇದ್ದುದನ್ನು ವಿಶ್ವ ಗಮನಿಸಿದ. ಪ್ರಯತ್ನ ಪಟ್ಟು ನಗುವನ್ನು ಮುಖದ ಮೇಲೆ ಎಳೆದು ತಂದುಕೊಳ್ಳುತ್ತ, 'ಹೇಗಿದ್ದೀಯೋ...' ಎನ್ನುತ್ತ ಸೋಫಾ ಮೇಲೆ ಕೂತು ನಿಟ್ಟುಸಿರುಬಿಟ್ಟ. ಕೆಲವು ಕ್ಷಣ ಸುಮ್ಮನಿದ್ದ. 'ನಿನ್ನ ನೋಡಿದರೆ ಅರವತ್ತಾಗಿದೆ ಅನ್ನಿಸಲ್ಲ. ನಾನು ನಿನಗಿಂತ ಒಂದು ವರ್ಷ ಚಿಕ್ಕವನು. ನಿಂಗೆ ಹೋಲಿಸಿದರೆ ನಾನು ಮುದುಕನ ಹಾಗೆ ಕಾಣಿಸ್ತೀನಿ' ಅಂದ. ಐದಾರು ನಿಮಿಷ ಸುಮ್ಮನೆ ಕೂತಿದ್ದ.

'ನಾನು ಬಂದು ಎರಡು ದಿನಗಳಾದ್ವು. ಬರುವ ಹಿಂದಿನ ದಿನ ಅಣ್ಣನ ಕೊನೇ ಮಗ ಜೀವರಾಜ ತೀರಿಕೊಂಡ...' ಎಂದು ಹೇಳಿ ಮತ್ತೆ ಮೌನಕ್ಕೆ ಜಾರಿದ. ಕೆಲ ನಿಮಿಷಗಳ ನಂತರ, ಜೀವರಾಜ ಅವನ ಅಕ್ಕನ ಮನೆಗೆ ಹೋಗಿದ್ದನಂತೆ. ಕಳಸದ ಹತ್ತಿರ ಯಾವುದೋ ಊರು. ಅವನ ಭಾವನ ಕಣ್ಣು ತಪ್ಪಿಸಿ ಅವರ ತೋಟದ ಬಾವಿ ನೀರಲ್ಲಿ ಮೀಯಲು ಹೋಗಿದ್ದನಂತೆ. ಸಣ್ಣ ಬಾವಿ. ಹದಿಮೂರು ಅಡಿ ಆಳ ಇತ್ತಂತೆ. ಅದರಲ್ಲಿ ನಾಲ್ಕಡಿ ನೀರಿತ್ತಂತೆ. ಬೇಸಿಗೆ ಕಾಲ, ನೀರು ಸೇದಿಕೊಂಡು ಸ್ನಾನ ಮಾಡುವಾಗ ಕಾಲು ಜಾರಿ ಬಾವಿಯೊಳಕ್ಕೆ ಬಿದ್ದ ಅಂದರು! ಐದೂವರೆ ಅಡಿ ಎತ್ತರವಿದ್ದ ಅವನು ನಾಲ್ಕಡಿ ನೀರಲ್ಲಿ ಮುಳುಗಿ ಸತ್ತದ್ದು ಹೇಗೆ? ಎಲ್ಲವೂ ನಿಗೂಢ ಅನ್ನಿಸ್ತಿದೆ ಮಾರಾಯ. ಇನ್ನೆರಡು ದಿನಗಳಲ್ಲಿ ಫಾರೆನ್ಸಿಕ್ ರಿಪೋರ್ಟ್ ಬರುತ್ತೆ. ಅವನ ಸಾವಿಗೆ ಕಾರಣ ಏನು ಅನ್ನೋದು ಗೊತ್ತಾಗುತ್ತೆ...' ಎಂದು ಹೇಳಿ ಸುಮ್ಮನಾದ.

'ಅಣ್ಣನ ಸಂಕಟ ನನ್ನಿಂದ ನೋಡಕಾಗಲ್ಲ ವಿಶ್ವ. ಮಕ್ಕಳ ಸಾವನ್ನು ನೋಡಬೇಕು ಅಂತಲೇ ದೇವರು ನನ್ನನ್ನು ಇನ್ನೂ ಉಳಿಸಿದ್ದಾನೆ ಅಂತ ಹೇಳಿಕೊಂಡು ಅಳ್ತಾನೆ. ನಂಗೇ ಯಾಕೆ ಹೀಗಾಯ್ತು ಅಂತ ಕೇಳ್ತಾನೆ. ನನಗಿಂತ ದೊಡ್ಡವನು ಮಕ್ಕಳಂತೆ ಅಳೋದನ್ನು ನೋಡೋಕೆ ನನ್ನಿಂದ ಆಗಲ್ಲ. ಅವನನ್ನು ಸಮಾಧಾನ